(SRI M. S. KRISHNAN)

matter of recent occurrence because more than 3,000 people are staging the dharna before the Vidhana Soudha and districts and taluka a offices. My motion also refers to the raise in prices, economic crisis, and corruption which exists in the country.

ಅಧ್ಯಕ್ಷರು :—ಮಾನ್ಯ ಸದಸ್ಯರು ಓದಿದ ರೂಲ್ಸ್‌ನಲ್ಲಿರುವ ಡೆಫಿನೆಟ್ ಮ್ಯಾಟರ್ ಯಾವುದು ?

ಶ್ರೀ ಎಂ. ಎಸ್. ಕೃಷ್ಣನ್ :—ಧರಣಿ ನಡೆಯುತ್ತಿರುವುದು ಮತ್ತು ಅದರಿಂದ ಉದ್ಭವವಾಗಿರ ತಕ್ಕ ಪರಿಸ್ಥಿತಿ.

ಅಧ್ಯಕ್ಷರು :—ನಿಮಗೆ ಇದರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಇರುವುದಿಲ್ಲ ಎಂದು ನಾನಾಗಲೇ ಉತ್ತರವನ್ನು ಕಳುಹಿಸಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್ ;—ಒಂದು ಮಾತು ಮಾತ್ರ ಹೇಳಬೇಕಾಗಿದೆ,

ಅಧ್ಯಕ್ಷರು ನಾವು ಈ ದಿನದ ಕಾರ್ಯಕ್ರಮದ ಪ್ರಕಾರ ದೊಡ್ಡ ಡಿಮ್ಯಾಂಡ್‌ಗಳ ಬಗ್ಗೆ ಇಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು. ತಾವು ಕಳುಹಿಸಿದ್ದ ವಿಷಯದ ಬಗ್ಗೆ ಚರ್ಚೆಗೆ ಅವಕಾಶವಿಲ್ಲ ಎಂದು ಆಗಲೇ ತಿಳಿಸಲಾಗಿದೆ. ಇದರಲ್ಲಿ ಹೇಳಬೇಕಾದುದು ಇನ್ನೇನೂ ಉಳಿದಿಲ್ಲ ತಾವು ದಯವಿಟ್ಟು ನಮ್ಮ ಸಭೆಯ ಕಾರ್ಯಕಲಾಪಗಳನ್ನು ಮಾಡಲು ಅನುವು ಮಾಡಿಕೊಡಿ, ಇದಕ್ಕಾಗಿ ಹೆಚ್ಚು ಕಾಲ ತೆಗದುಕೊಳ್ಳುವುದು ಬೇಡ,

ಶ್ರೀ ಎಂ. ಎಸ್. ಕೃಷ್ಣನ್ ;—ಕಾಲ ಕಳೆಯಬೇಕೆಂದು ನಾನು ವಾದ ಮಾಡುತ್ತಿಲ್ಲ, ಹಾಗೂ ತಾವು ಕೊಟ್ಟಿರುವ ರೂಲಿಂಗ ಬಗ್ಗೆನೂ ನಾನು ಇಲ್ಲಿ ಪ್ರಶ್ನೆ ಮಾಡುತ್ತಿಲ್ಲ. ನಾನು ತಮ್ಮನ್ನು ಕೇಳಿಕೊಳ್ಳುವುದು ಇಂದು ದೇಶದಲ್ಲಿ ಏರುತ್ತಿರುವ ಬೆಲೆಗಳಿಂದ ಒಂದು ರೀತಿಯಾದ ಅಶಾಂತಿಯುತವಾವ ಪರಿಸ್ಥಿತಿ ಉಂಟಾಗಿದೆ. ಇದರಿಂದ ಭ್ರಷ್ಟಾಚಾರಗಳು ಹೆಚ್ಚಾಗುತ್ತಿವೆ. ಇದನ್ನೆಲ್ಲಾ ಮುಖ್ಯವಾಗಿ ಸರಕಾರದ ಗಮನಕ್ಕೆ ತರಬೇಕಾಗಿದೆ. ಆದಕ್ಕಾಗಿ ತಾವು ಇದರ ಬಗ್ಗೆ ಹೇಳಲು ಇಲ್ಲಿ ಅವಕಾಶ ಮಾಡಿಕೊಡಬೇಕು.

(ii) re lathi chrge on Railway works at Hubli

ಸೂಚನೆ ಕೂಡ ತಾವು ಓದಬೇಕು,

Sri S. M. KRISHNA :—I raise Point of Order. When the Chair has ruled out Adjournment Motion, again making reference to that particular adjournment motion is out of order.

ಅಧ್ಯಕ್ಷರು ;—ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಇದರ ಬಗ್ಗೆ ಇಲ್ಲಿ ಚರ್ಚೆ ಮಾಡಲು ಹೇಳುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ :—ನಮ್ಮ ನಿಲುವಳಿ ಸೂಚನೆಯಲ್ಲಿ ತಿಳಿಸಿರುವ ವಿಷಯ ಹುಬ್ಬಳ್ಳಿಯಲ್ಲಿರುವ ಕಾರ್ಮಿಕರ ಮೇಲೆ ಪೋಲೀಸಿನವರು ದಬ್ಬಾಳಿಕೆ ನಡೆಸಿ ಅಖಿಲ ಭಾರತ ನಾಯಕರುಗಳನ್ನು ದಸ್ತಗಿರಿ ಮಾಡಿದ್ದಾರೆ ಎನ್ನುವುದು ಆಗಿದೆ.

ಅಧ್ಯಕ್ಷರು :—ಇದಕ್ಕೇನು ಸಂಬಂಧ ? ಇದರ ಬಗ್ಗೆ ಹೆಚ್ಚಲು ಈಗ ಅವಕಾಶವಾಗುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ :— ಜನರ ಸಮಸ್ಯಗಳನ್ನು ಪೇಳಿ ಸರಕಾರದ ಗಮನ ಸೆಳೆಯಬೇಕೆಂದು ಇಲ್ಲಿ ಹೇಳುತ್ತಿರುವುದು.

ಅಧ್ಯಕ್ಷರು :—ರೈಲ್ವೆಗೂ ನಮ್ಮ ಸರಕಾರಕ್ಕೂ ಏನು ಸಂಬಂಧ ? ಇದು ಕೇಂದ್ರ ಸರಕಾರದವರಿಗೆ ಸೇರಿದ್ದು.

ಶ್ರೀ ಕೋಣಂದೂರು ಲಿಂಗಪ್ಪ :—ನಮ್ಮ ರಾಜ್ಯದ ಪೋಲೀಸರು ಕಾರ್ಮಿಕರನ್ನೇಕೆ ಹಿಡಿಯಂ ಬೇಕಾಗಿತ್ತು ?

ಅಧ್ಯಕ್ಷರು.—ಇದು ಲಾ ಆಂಡ್ ಆರ್ಡರು ಪ್ರಶ್ನೆ. ರಾಜ್ಯಕ್ಕೆ ಸಂಬಂಧಿಸಿರುವುದು. ಇದರ ವಿಚಾರ ಗಳೆಲ್ಲಾ ತಮಗೆ ಚೆನ್ನಾಗಿ ಗೊತ್ತು. ಇದನ್ನು ಇಲ್ಲಿ ಚರ್ಚೆ ಮಾಡಲು ಅವಕಾಶವಾಗುವುದಿಲ್ಲ. ದಯವಿಟ್ಟು ನಾವು ಮುಂದೆ ಇರುವ ಕಾರ್ಯಕಲಾಪಗಳ ಬಗ್ಗೆ ಕೆಲಸ ಮಾಡೋಣ, ಅದಕ್ಕೆ ಅನುವು ಮಾಡಿಕೊಡಿ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಹೇಳಿದಂತೆ ಇದು ಲಾ ಆಂಡ್ ಆರ್ಡರು ಪ್ರಶ್ನೆ ಇದರ ಬಗ್ಗೆ ಅವಕಾಶವಿಲ್ಲ ಎಂದಿರಿ. ಇದೊಂದು ಸಣ್ಣ ಲಾ ಆಂಡ್ ಆರ್ಡರು ಪ್ರಶ್ನೆ ಎಂದಾಗುವುದಿಲ್ಲ. ಒಂದು ಪಕ್ಷ ಇದೇ ರೀತಿ ಮುಂದುವರಿಯುವುದಾದರೆ ಲಾ ಆಂಡ್ ಆರ್ಡರು ಪರಿಸ್ಥಿತಿ ಇನ್ನಷ್ಟು ಹದಗೆಡುವಂತಹ ಸ್ಥಿತಿ ಬರುತ್ತದೆ. ಇಂತಹ ಒಂದು ದೊಡ್ಡ ಪ್ರಶ್ನೆ ಇದರಲ್ಲಿದೆ. ಇದರಲ್ಲಿ ಸರಕಾರದ ದೋರಣೆ ಏನಿದೆ ಅದು ಸರಿಯಲ್ಲ, ಇದಕ್ಕಾಗಿ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎಂದು ತಮ್ಮಲ್ಲಿ ಕೇಳುತ್ತಿರುವುದು.

ಅಧ್ಯಕ್ಷರು.—ಇದಕ್ಕೆ ಅವಕಾಶ ಕೊಡುವುದಿಲ್ಲ ಎಂದಾಗಲೇ ತಿಳಿಸಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಲಾ ಆಂಡ್ ಆರ್ಡರು ಪ್ರಶ್ನೆ ಎಂದು ಹೇಳಿದರು ಇಂದು ನಮ್ಮ ರಾಜ್ಯದಲ್ಲಿ ಹುಬ್ಬಳಿಯಲ್ಲಿ ಯಾವ ರೀತಿ ಪೋಲೀಸರು ಲಾಠಿ ಚಾರ್ಜು ಮಾಡುತ್ತಿದ್ದಾರೆ ಎಂಬುದನ್ನು ಅವರನ್ನು ನೋಡಿದರೆ ಅವರಿಗೆ ಗೊತ್ತಾಗುತ್ತಿತ್ತು ಯಾರೂ ಹೇಳುವವರು ಕೇಳುವವರು ಇಲ್ಲವೇ ? ನಾವು ನಿಲುವಳಿ ಸೂಚನೆ ಕಳುಹಿಸಿರುವುದು ಲಾ ಆಂಡ್ ಆರ್ಡರು ಪ್ರಶ್ನೆ ಎಂದಲ್ಲ. ನಮ್ಮ ಅಸೆಂಬ್ಲಿ ವಿಧಿಯಲ್ಲಿ ರುವ ರೂಲು ೫೨ರಲ್ಲಿ ಏನು ಹೇಳಲಾಗಿದೆಯೋ ಅದರ ನಿಯಮಗಳಿಗನುಗುಣವಾಗಿಯೇ ನಿಲುವಳಿ ಸೂಚನೆ ಕಳುಹಿಸುತ್ತಿರುವುದು.

ಶ್ರೀ ಹೆಚ್. ಎಂ. ಚನ್ನಬಸಪ್ಪ :—ಈ ನಿಲುವಳಿ ಸೂಚನೆಯ ವಿಚಾರವಾಗಿ ಅಧ್ಯಕ್ಷರವರು ಪರಿ ಶೀಲನೆ ಮಾಡಿ ಇದನ್ನು ತರಲು ಅವಕಾಶವಿಲ್ಲ ಎಂದು ರೂಲಿಂಗು ಕೊಟ್ಟಿರುವಾಗ ಪುನಃ ಅವರ ರೂಲಿಂಗು ಸರಿಯೇ ತಪ್ಪೇ ಎಂದು ಯಾರು ಇದರ ಬಗ್ಗೆ ಅರ್ಗ್ಯುಮೆಂಟ್ ಮಾಡುವ ಹಾಗಿಲ್ಲ. ಅವರು ಕೊಡುವ ರೂಲಿಂಗನ್ನು ಸಭೆಯಲ್ಲಿ ಎಲ್ಲರೂ ಪಾಲನೆ ಮಾಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ :—ನಾವು ಅವರ ರೂಲಿಂಗನ್ನು ಇಲ್ಲಿ ಪ್ರಶ್ನೆ ಹೂಡುತ್ತಿಲ್ಲ. ಸ್ಪೀಕರ್ ರವರಿಗೆ ವಿರೋಧದಾಗಿ ನಾವು ಇಲ್ಲಿ ಏನನ್ನು ಹೇಳಲೂ ಇಚ್ಛೆ ಇಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಒಮ್ಮೆ ಸ್ಪೀಕರ್‌ರವರು ರೂಲಿಂಗು ಕೊಟ್ಟಿರುವಾಗ ಅದನ್ನು ಬದ ಲಾವಣೆ ಮಾಡಬೇಕಾದರೆ ಮಾನ್ಯ ಸದಸ್ಯರು ಸ್ಪೀಕರ್‌ರವರ ಚೇಂಬರಿಗೆ ಆ ನಂತರ ಹೋಗಿ ಅವರಲ್ಲಿ ಇವರ ಬಗ್ಗೆ ಕನ್‌ವಿನ್ಸ್ ಮಾಡುವುದಕ್ಕೆ ಸಕಾರಣಗಳನ್ನು ತೋರಿಸಬಹುದು. ಆಗ ಇದರ ಬಗ್ಗೆ ವಿರಾಮವಾಗಿ ವಿಚಾರ ಮಾಡಲು ಎಲ್ಲರಿಗೂ ಅವಕಾಶ ಸಿಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಯಾರು ಶಾಂತಿಯುಂತವಾಗಿ ಚಳುವಳಿ ಹೂಡುತ್ತಿದ್ದಾರೋ ಅಂತಹವರ ಮೇಲೆ ಜನರನ್ನು ಹತ್ತಿಕ್ಕಿ ಹೊಡೆಯುವುದಕ್ಕೆ ಹೋದರೆ ಇದು ಪ್ರಜಾಪ್ರಭುತ್ವವನ್ನು ಕೊಲೆ ಮಾಡಿ ದಂತೆಯೇ ? ಇನ್ನು ಮುಂದೆ ಇದಕ್ಕೆ ಇತಿಶ್ರೀ ಹಾಡಬೇಕು. ಇದು ನಿಲುವಳಿ ಸೂಚನೆ ಏಕೆ ಆಗುತ್ತದೆ ಎಂದು ಹೇಳಲು ನಾವು ತಪಂಗೆ ಇಲ್ಲಿ ಕೆಲವು ವಿಷಯಗಳನ್ನು ಹೇಳಬೇಕಾಗುತ್ತದೆ. ತಾವು ಲಾ ಆಂಡ್ ಆರ್ಡರು ವಿಷಯ ಎಂದರೆ ಯಾವುದನ್ನೂ ತರಲು ಅವಕಾಶವಿಲ್ಲ ಎಂದಾಯಿತು. ಆದರೆ ಹಿಂದೆ ಪುಧುಗಿರಿ ಯಲ್ಲಿ ನಡೆದ ಪೋಲೀಸರ ದುರಾಚಾರಗಳ ಬಗ್ಗೆ ಇಲ್ಲಿ ತಂದ ನಿಲುವಳಿ ಸೂಚನೆಗೆ ಆಗ ಸಭೆ ಒಪ್ಪಿಗೆ ಕೊಟ್ಟಿತು. ಹಾಗಿರುವಾಗ ಇದು ಬರೀ ಲಾ ಆಂಡ್ ಆರ್ಡರು ವಿಷಯ ಅಷ್ಟೇ ಅಲ್ಲ ಪರಿಸ್ಥಿತಿ ಮುಂದೆ ವಿಕೋಪಕ್ಕೆ ಹೋಗಬಹುದು ಆ ರೀತಿ ಹೋಗಲು ಅವಕಾಶ ಕೊಡಬಾರದು ಎಂದು ನಾವು ಸರಕಾರದವರಿಗೆ ಕೆಲವು ಸಲಹೆಗಳನ್ನು ಕೊಡಬೇಕಾಗುತ್ತದೆ. ಈಗ ಸರಕಾರ ಅನುಸರಿಸುತ್ತಿರುವ ರೀತಿ ಸರಿಯಾದದಲ್ಲ ಅದನ್ನು ತಿದ್ದಿಕೊಳ್ಳಬೇಕೆಂದು ಒತ್ತಾಯ ಮಾಡಲು ಈ ಮೂಲಕ ಒಂದು ಅವಕಾಶ ಸಿಗುತ್ತದೆ ಎನ್ನುವ ಉದ್ದೇಶದಿಂದ ನಾವು ಈ ನಿಲುವಳಿ ಸೂಚನೆಯನ್ನು ತರುತ್ತಿರುವುದು. If this Motion satisfies the rule as laid down under Rule 52, I am definitely entitled to raise this question.

ಶ್ರೀ ಹೆಚ್. ಎಂ ಚನ್ನಬಸಪ್ಪ.—ಅಧ್ಯಕ್ಷರೇ, ಮಾನ್ಯ ಸದಸ್ಯರು ಇದರ ಬಗ್ಗೆ ಇಲ್ಲಿ ಪೇಳೆಯನ್ನು ಕಳೆಯುವುದಕ್ಕಿಂತ ಅಧ್ಯಕ್ಷರ ಚೇಂಬರಿಗೆ ಹೋಗಿ ಅಧ್ಯಕ್ಷರು ಕೊಟ್ಟಿರುವ ರೂಲಿಂಗನ್ನು ಬದಲಾಪಣೆ ಮಾಡ ಬೇಕಾಗಿದರೆ ನಿರ್ದಿಷ್ಟವಾದ ವಿಚಾರಗಳಿದ್ದರೆ, ಅವರಿಗೆ ಅಲ್ಲಿ ಆ ವಿಷಯಗಳನ್ನು ತಿಳಿಸಿದರೆ ಅಧ್ಯಕ್ಷರು ಅವ...ನ್ನು ಪರಿಶೀಲಿಸಬಹುದು ಆ ರೀತಿ ಮಾಡುವುದು ಸರಿಯಾಗಿರುತ್ತದೆ. ಅದನ್ನು ಬಿಟ್ಟು ಇಲ್ಲಿ ನಮ್ಮ ಕಾರ್ಯ ಕಲಾಪಗಳಿಗೆ ಅಡಚಣೆ ಮಾಡುವುದು ಸರಿಯಾಗುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಶ್ರೀ ಚನ್ನಬಸಪ್ಪನವರು ವ್ಯಾಖ್ಯಾನ ಚತುರರು ಎನ್ನುವು ದನ್ನು ನಾವು ತಿಳಿದುಕೊಂಡಿದ್ದೇವೆ ನಾವೆಲ್ಲ ಸ್ಪೀಕರ್‌ರವರಿಗೆ ವಿರೋಧವಾಗಿ ಹೋಗಬೇಕೆಂಬ ಇಚ್ಛೆಯೂ ಇಲ್ಲ ಹಾಗೂ ಈ ವಿಚಾರದಲ್ಲಿ ಬೇರೆಯವರನ್ನು ಇಲ್ಲಿ ಎತ್ತಿಕಟ್ಟುತ್ತಿಲ್ಲ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ದೇಶದಲ್ಲಿರುವ ಲಾ ಆಂಡ್ ಆರ್ಡರು ಪ್ರಶ್ನೆ ಬಗ್ಗೆ ಹೇಳುವಾಗ ರೈಲ್ವೆ ಸ್ಟೈಕ್ ಇಲ್ಲೀಗಲ್ ಎಂದು ಕೇಂದ್ರ ಸರಕಾರ ನಿಷೇಧಿಸಿರುವುದರಿಂದ ಪ್ರಾಂತ್ಯ ಸರಕಾರಗಳೂ ಆ ವಿಚಾರದಲ್ಲಿ ಕಾನೂನು ವಿಧಿನಿಯಮಗಳಿಗನುಸಾರವಾಗಿ ಅದರ ಪರಮಿತಿಯೊಳಗೆ ಕೆಲಸ ಮಾಡಬೇಕಾಗಿ ಬರುತ್ತದೆ. ಸರ್ಕಾರದ ಆಜ್ಞೆಗಳನ್ನು ವಿರೋಧಿಸಿ ಚಳುವಳಿ ಮಾಡಲು ಹೋದ ಜನರನ್ನು, ಮುಂದೆ ದೇಶದಲ್ಲಿ ಅಶಾಂತಿ ತಲೆದೋರಬಹುದು ಎಂದು ಅಂತಹವರನ್ನು ಅರೆಸ್ಟ್ ಮಾಡಿರಬಹುದು.

ಶ್ರೀ ಕೋಣಂದೂರು ಲಿಂಗಪ್ಪ.—ಅಶಾಂತಿ ಪರಿಸ್ಥಿತಿಯನ್ನುಂಟು ಮಾಡಿದವರು ನಾವಲ್ಲ.

MADAM SPPAKER.—I will have to ask the member to with draw from the House if he does like this.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ನಿಲುವಳಿ ಸೂಚನೆಯಾಗುವುದಿಲ್ಲ ಎಂದು ಹೇಳಿದ ಮೇಲೆ ಇದನ್ನು ಮತ್ತೆ ಎತ್ತುವುದು ನ್ಯಾಯವಲ್ಲ. ಇದನ್ನು ಯಾರೂ ಒಪ್ಪುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಶ್ರೀ ಚನ್ನಬಸಪ್ಪನವರು ಹೇಳಿರುವ ಸಲಹೆಯನ್ನು ಒಪ್ಪಿ ಕೊಳ್ಳಲಾಗುವುದಿಲ್ಲ ರೈತ್ವೆ ಮುಷ್ಕರವನ್ನು ಯಾರೂ ಇಲ್ಲೀಗಲ್ ಎಂದು ಎಲ್ಲೂ ಹೇಳಿದ್ದು ನನಗೆ ಗೊತ್ತಿಲ್ಲ. ಇನ್ನೂ ಮುಷ್ಕರವೇ ಪ್ರಾರಂಭವಾಗಿಲ್ಲ ಅಷ್ಟರೊಳಗೆ ಹೊರಗಡೆ ಇದ್ದ ನಾಯಕರುಗಳನ್ನೆಲ್ಲಾ ಹಿಡಿದು ಅವರ ಮೇಲೆ ಲಾಠಿ ಪ್ರಹಾರ ಮಾಡುವುದು ಯಾವ ನ್ಯಾಯ ಎಂದು ಇಲ್ಲಿ ಪ್ರಶ್ನೆ ಮಾಡಬೇಕಾಗಿದೆ. ಮೊದಲು ಸೀದಾಗಿ ಇವರನ್ನು ಅರೆಸ್ಟ್ ಮಾಡಬೇಕಾದ್ದೇ ಇರಲಿಲ್ಲ.

ಅಧ್ಯಕ್ಷರು.—ತಾವುಗಳೆಲ್ಲಾ ಈ ರೀತಿ ಪಾತನಾಡುತ್ತಾ ಹೋದರೆ ಇದುವರೆಗೆ ತಾವು ಏನೇನು ಹೇಳಿದರೋ ಅವೆಲ್ಲಾ ಎಕ್ಸ್‌ಪಂಜ್ ಮಾಡಬೇಕೆಂದು ಹೇಳಬೇಕಾಗುತ್ತದೆ. ನಿಲುವಳಿ ಸೂಚನೆಗೆ ಬದಲು ಕಾಲಿಂಗ್ ಅಟೆಂಷನ್ ನೋಟೀಸ್ ಆಗಿ ಕಳುಹಿಸಿದರೆ ಆಗ ನಾನು ಮಂತ್ರಿಗಳಿಗೆ ಇದರ ಬಗ್ಗೆ ಹೇಳಿಕೆ ಕೊಡಲು ಅವಕಾಶ ಮಾಡಿಕೊಡುತ್ತೇನೆ.

Re: *Construction of Cinema Theatres in K. G. Circle Grant of Licences.*

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ನಾನು ಈ ಹಿಂದೆ ಚಲನಚಿತ್ರ ಮಂದಿರಗಳನ್ನು ಕಟ್ಟ ತಕ್ಕಂಥ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದ್ದೆ. ಅವರು ಕೂಡ ಅದರ ಬಗ್ಗೆ ಒಂದು ಹೇಳಿಕೆ ಕೊಡುತ್ತೇನೆ ಎಂದು ಹೇಳಿದ್ದರು ಈವಾಗ ನಮಗೆ ಒಂದು ಆತಂಕ ಏನಾಗಿದೆ ಎಂದರೆ ಈ ಸದನದಲ್ಲಿ ಏನಾದರೂ ಒಂದು ವಿಚಾರದ ಬಗೆ ಸರ್ಕಾರದ ವತಿಯಿಂದ ಉತ್ತರಗಳನ್ನು ನಿರೀಕ್ಷಿಸುತ್ತಿದ್ದಾಗ ಆದಕ್ಕೆ ಸದನದಲ್ಲಿ ಉತ್ತರ ದೊರೆಯುವುದಕ್ಕೆ ಹಾಗೆ ದೊರೆಯದಿದ್ದಾಗ ನಾವು ಏನು ಮಾತನಾಡಬೇಕು, ಸದಸ್ಯರು ಕೇಳತಕ್ಕ ವಿಚಾರದ ಬಗ್ಗೆ ಏನಾದರೂ ಮಾಹಿತಿ ಇದ್ದರೆ ಅವರು ಒದಗಿಸಬೇಕು ಇಲ್ಲವೆ ಈ ಬಗ್ಗೆ ಏನಾದರೂ ಒಂದು ವಿವರಣೆ ಕೊಡಬೇಕು. ಆ ರೀತಿ ಒಂದು ಅವಕಾಶ ಕಲ್ಪಿಸಬೇಕಾಗಿ ಕೇಳಿಕೊಳ್ಳುತ್ತೇನೆ. ಕೊಪ್ಪೇಗೌಡ ಸರ್ಕಲ್‌ನಲ್ಲಿ ಈಗಾಗಲೇ ಅನೇಕ ಸಿನಿಮಾ ಮಂದಿರಗಳು ಆಗಿವೆ. ಪುನಃ ಮತ್ತೆ ಮತ್ತೆ ಅದೇ ಜಾಗದಲ್ಲಿ ಸಿನಿಮಾ ಮಂದಿರಗಳನ್ನು ಕಟ್ಟುತಕ್ಕಂಥ ಕೆಲಸಗಳು ನಡೆಯುತ್ತಾ ಇದೆ. ಇದಾದ್ದಕ್ಕೆ ಅವಕಾಶ ಕೊಡಬೇಡಿ ಅಂತ ನಾನು ಹೇಳಿದ್ದೆ.

SRI H. M. CHANNABASAPPA.—I will make a statement tomorrow.